ವಿಷಯ : 2009–10ನೇ ಸಾಲಿನಲ್ಲಿ ಪರಿಶಿಷ್ಟರ ಅಭಿವೃದ್ಧಿಗೆ ಅನುದಾನ ಬಿಡುಗಡೆ ಮಾಡುವುದು

585 (631) ಶ್ರೀ ತಿಪ್ಪೇಸ್ವಾಮಿ (ಚಳ್ಳಕೆರೆ): ಮಾನ್ಯ ಸಮಾಜ ಕಲ್ಯಾಣ ಸಚಿವರು. ದಯಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:

ಅ) 2009–10ನೇ ಸಾಲಿನಲ್ಲಿ ಭಾರತ ಸಂವಿಧಾನ ಅನುಚ್ಛೇಧ 275ರಡಿಯಲ್ಲಿ ಪರಿಶಿಷ್ಟ ವರ್ಗದವರ ಮೂಲಭೂತ ಸೌಕರ್ಯದ ಅಭಿವೃದ್ಧಿ ಚಿತ್ರದುರ್ಗ ಜಿಲ್ಲೆಗೆ ಯಾವ ಯಾವ ವಿಧಾನ ಸಭಾ ಕ್ಷೇತ್ರಕ್ಕೆ ಎಷ್ಟೆಷ್ಟು ಅನುದಾನ ಬಿಡುಗಡೆ ಮಾಡಲಾಗಿದೆ. (ವಿವರ ನೀಡುವುದು);

ಆ) ಈ ಅನುದಾನವನ್ನು ಚಳ್ಳಕೆರೆಯ ವಿಧಾನ ಸಭಾ ಕ್ಷೇತ್ರದ ಹಳ್ಳಿಗಳಿಗೆ ಎಷ್ಟುಷ್ಟು ಹಂ ಬಿಡುಗಡೆ ಮಾಡಲಾಗಿದೆ. (ವಿವರ ನೀಡುವುದು)?

ಶ್ರೀ ಡಿ. ಸುಧಾಕರ್ : (ಸಮಾಜ ಕಲ್ಯಾಣ ಸಚಿವರು):

ಅ) 2009–10ನೇ ಸಾಲಿನಲ್ಲಿ ಭಾರತ ಸಂವಿಧಾನ ಅನುಚ್ಛೇಧ 275 (1)ರಡಿ ಪರಿಶಿಷ್ಟ ವರ್ಗದವರಿಗೆ ಮೂಲಭೂತ ಸೌಕರ್ಯ ಒದಗಿಸುವ ಕಾರ್ಯಕ್ರಮಗಳಿಗೆ ಅನುದಾನವನ್ನು ತಾಲ್ಲೂಕುವಾರು ಬಿಡುಗಡೆ ಮಾಡಲಾಗುತ್ತಿದ್ದು. ಚಿತ್ರದುರ್ಗ ಜಿಲ್ಲೆಯ ವಿವಿಧ ತಾಲ್ಲೂಕುಗಳಿಗೆ ಬಿಡುಗಡೆಯಾದ ಅನುದಾನ ವಿವರ ಈ ಕೆಳಕಡಂತಿದೆ:

ಕ್ರ.ಸಂ.	ತಾಲ್ಲೂಕುಗಳು	ರೂ. ಲಕ್ಷಗಳಲ್ಲಿ
1.	ಹೊಸದುರ್ಗ	20.00
2.	ಮೊಳಕಾಲ್ಮೂರು	30.00
3.	ಹೊಳಲ್ಕೆರೆ	22.00
4.	ಹಿರಿಯೂರು	75.00
5.	ಚಿತ್ರದುರ್ಗ	15.00
6.	ಚಳ್ಳಕೆರೆ	32.00
	ಒಟ್ಟು	**194.00**

ಆ) ಚಳ್ಳಕೆರೆ ವಿಧಾನ ಸಭಾ ಕ್ಷೇತ್ರದ ಹಳ್ಳಿಗಳಿಗೆ ಪರಿಶಿಷ್ಟ ವರ್ಗದ ಕಾಲೊನಿಗಳಿಗೆ ಸಿ.ಸಿ. ರಸ್ತೆ/ಚರಂಡಿ ಕಾಮಗಾರಿಗಳಿಗೆ ಬಿಡುಗಡೆ ಮಾಡಲಾದ ಅನುದಾನದ ವಿವರ ಈ ಕೆಳಗಿನಂತಿವೆ:–

ಕ್ರ.ಸಂ.	ಗ್ರಾಮದ ಹೆಸರು	ರೂ. ಲಕ್ಷಗಳಲ್ಲಿ
1.	ಆಯ್ಕಲ್ ನಾಯಕರಹಟ್ಟಿ–ಚಳ್ಳಕೆರೆ ತಾಲ್ಲೂಕು	5.00
2.	ಹುಣಸೆಕಟ್ಟೆ–ಚಿತ್ರದುರ್ಗ ತಾಲ್ಲೂಕು	5.00
3.	ಬೋರಪ್ಪನಹಟ್ಟಿ–ಚಳ್ಳಕೆರೆ ತಾಲ್ಲೂಕು	5.00
4.	ಕೆರೆಮುಂದಲಹಟ್ಟ–ಚಳ್ಳಕೆರೆ ತಾಲ್ಲೂಕು	5.00
5.	ಕೆರೆಹಿಂದಲಹಟ್ಟಿ –ಚಳ್ಳಕೆರೆ ತಾಲ್ಲೂಕು	5.00
	ಒಟ್ಟು	25.00

ವಿಷಯ – ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳ ಮೆಟ್ರಿಕ್ ನಂತರ ವಸತಿ ನಿಲಯಗಳು

588 (759) ತುಕಾರಾಮ್ ಇ.(ಸಂಡೂರ್): ಮಾನ್ಯ ಸಮಾಜ ಕಲ್ಯಾಣ ಸಚಿವರು. ದಯಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:

ಅ) ಸಂಡೂರ್ ತಾಲ್ಲೂಕಿನಲ್ಲಿ ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ವಿದ್ಯಾರ್ಥಿಗಳಿಗೆ ವ್ಯಾಸಂಗ ಮಾಡಲು ಮೆಟ್ರಿಕ್ – ನಂತರದ ಬಾಲಕರ ವಸತಿನಿಲಯಗಳು ಇಲ್ಲದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ ಸರ್ಕಾರದವರು ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಕೈಗೊಂಡಿರುವ ಕ್ರಮಗಳೇನು ?

ಶ್ರೀ ಡಿ. ಸುಧಾಕರ್ : (ಸಮಾಜ ಕಲ್ಯಾಣ ಸಚಿವರು):